**ದಿನಾಂಕ 14-08-2013 ರಂದು ಸಾಯಂಕಾಲ 5-00 ಗಂಟೆಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರ ಅಧ್ಯಕ್ಷತೆಯಲ್ಲಿ ನ್ಯಾಯಾಲಯಗಳ ಪ್ರಕರಣಗಳ ಬಗ್ಗೆ ಪರಿಶೀಲನಾ ಸಭೆಯ ನಡವಳಿಗಳು.**

\- - -

ಸಭೆಯ ಅಧ್ಯಕ್ಷತೆ ವಹಿಸಿದ್ದ ಪ್ರಧಾನ ಕಾರ್ಯದರ್ಶಿಗಳು **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲಿ ಬರುವ** ಎಲ್ಲಾ ಶಾಖೆಗಳ ನ್ಯಾಯಾಲಯ ಪ್ರಕರಣಗಳ ಬಗ್ಗೆ ಅವಲೋಕಿಸಿದರು.

- ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ರವರು ರೂಪಿಸಿರುವ ನಮೂನೆಯಲ್ಲಿ ಇನ್ನು ಮುಂದೆ ಎಲ್ಲಾ ಶಾಖೆಗಳವರು ನ್ಯಾಯಾಲಯದ ಪ್ರಕರಣಗಳ ಬಗ್ಗೆ ವಿವರ ನೀಡಲು ಸೂಚಿಸಿದರು.
- ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಶಾಖೆರವರು ನಮೂನೆಯಲ್ಲಿ ನೀಡಿದ ಮಾಹಿತಿಯನ್ನು ಪರಾಂಬರಿಸಿ ಬಾಕಿ ಇರುವ 27 ಪ್ರಕರಣಗಳ ಪೈಕಿ, 21 ಪ್ರಕರಣಗಳಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸದಿರುವ ಬಗ್ಗೆ ಗಮನಿಸಿ, ಈ ಸಂಬಂಧ ಸೂಕ್ತ ಕ್ರಮ ಜರುಗಿಸಲು ಸೂಚಿಸಿದರು.
- ಸೇವೆಗಳು-ಎ ಶಾಖೆಯು ನೀಡಿದ ಮಾಹಿತಿಗಳನ್ನು ಪರಾಂಬರಿಸಿ, ಸರ್ವೋಚ್ಚ ನ್ಯಾಯಾಲಯ ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಎಸ್.ಎಲ್.ಪಿ. ರಿಟ್ ಅರ್ಜಿಗಳ ಬಗ್ಗೆ ಅವಲೋಕಿಸಿ, ಸರ್ಕಾರದ ಹಂತದಲ್ಲಿ 13 ಪ್ರಕರಣಗಳ ಬಗ್ಗೆ ಹಾಗೂ ಇಲಾಖಾ ಮುಖ್ಯಸ್ಥರ ಹಂತದಲ್ಲಿ 9 ಪ್ರಕರಣಗಳಲ್ಲಿ ಕಂಡಿಕಾವಾರು ಷರಾಗಳನ್ನು ಸರ್ಕಾರಿ ವಕೀಲರಿಗೆ ನೀಡದಿರುವ ಬಗ್ಗೆ ಪ್ರತಿಕ್ರಿಯಿಸಿ ಕೂಡಲೇ ಈ ಬಗ್ಗೆ ಕ್ರಮವಹಿಸಲು ಸೂಚಿಸಿದರು.
- ಸೇವೆಗಳು-ಬಿ ಶಾಖೆಯಲ್ಲಿ 48 ಪ್ರಕರಣಗಳು ಬಾಕಿ ಇದ್ದು, 17 ಪ್ರಕರಣಗಳಲ್ಲಿ ಕಂಡಿಕೆವಾರು ಷರ್ರಾಗಳನ್ನು ನೀಡದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ, ಕೂಡಲೇ ಈ ಬಗ್ಗೆ ಕ್ರಮ ಜರುಗಿಸಲು ಸೂಚಿಸಿದರು.
- ಸೇವೆಗಳು-ಸಿ ಶಾಖೆಯಲ್ಲಿ 37 ಕೆ.ಎ.ಟಿ. ಪ್ರಕರಣಗಳು ಹಾಗೂ 47 ಉಚ್ಚ ನ್ಯಾಯಲಯದ ಪ್ರಕರಣಗಳು ಬಾಕಿ ಇರುವ ಬಗ್ಗೆ ಅವಲೋಕಿಸಿ, ಕ್ರಮವಾಗಿ 14 ಹಾಗೂ 23 ಪ್ರಕರಣಗಳಲ್ಲಿ ಕಂಡಿಕೆವಾರು ಷರಾಗಳನ್ನು ನೀಡದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ, ಕೂಡಲೇ ಈ ಬಗ್ಗೆ ಕ್ರಮ ಜರುಗಿಸಲು ಸೂಚಿಸಿದರು.
- ಗ್ರಾಮೀಣ ನೀರು ಸರಬರಾಜು ಶಾಖೆರವರು ಯಾವುದೇ ಮಾಹಿತಿ ನೀಡಿಲ್ಲದಿರುವುದನ್ನು ಗಮನಿಸಿ ಮುಂದಿನ ಸಭೆಗೆ ನಿಗದಿತ ನಮೂನೆಯಲ್ಲಿ ಮಾಹಿತಿ ನೀಡಲು ಸೂಚಿಸಿದರು.
- ಜಿಲ್ಲಾ ಪಂಚಾಯತ್ ಹಾಗೂ ಗ್ರಾಮ ಪಂಚಾಯತ್ ಶಾಖೆಗಳಲ್ಲಿ 11 ಹಾಗೂ 28 ಪ್ರಕರಣಗಳು ಬಾಕಿ ಇದ್ದು ಇವುಗಳ ಪೈಕಿ ಕ್ರಮವಾಗಿ 1 ಹಾಗೂ 21 ಪ್ರಕರಣಗಳಲ್ಲಿ ಪ್ರತಿ ರಕ್ಷಣಾ ಹೇಳಿಕೆ ಸಲ್ಲಿಸದಿರುವ ಬಗ್ಗೆ ಪ್ರಧಾನ ಕಾರ್ಯದರ್ಶಿರವರು ಗಮನಿಸಿ, ಈ ಬಗ್ಗೆ ತಕ್ಷಣ ಕ್ರಮ ಜರುಗಿಸಲು ನಿರ್ದೇಶಕರು (ಪಂ.ರಾಜ್) ರವರಿಗೆ ಸೂಚಿಸಿದರು.
- ಬೇರೆ ಇತರೆ ಎಲ್ಲಾ ಶಾಖೆಗಳ ನ್ಯಾಯಾಲಯ ಪ್ರಕರಣಗಳ ಬಗ್ಗೆ ಪರಿಶೀಲನೆ ನಡೆಸಿ ಪ್ರಕರಣಗಳ ತ್ವರಿತ ವಿಲೇವಾರಿಗೆ ಶೀಘ್ರ ಕ್ರಮ ಜರುಗಿಸಲು ಸೂಚಿಸಿದರು.

...2/-

- ನ್ಯಾಯಾಲಯಗಳಲ್ಲಿ ವಿಲೇವಾರಿಯಾದ ಪ್ರಕರಣಗಳ ಬಗ್ಗೆ 10 ದಿನಗಳೊಳಗಾಗಿ ಸಂಬಂಧಿತ ನ್ಯಾಯಲಯಗಳಿಂದ ತೀರ್ಪಿನ ಪ್ರತಿಗಳನ್ನು ಪಡೆದು ಅಂತಹ ಪ್ರಕರಣಗಳನ್ನು ಮುಕ್ತಾಯಗೊಳಿಸಲು ಎಲ್ಲಾ ಶಾಖೆಗಳ ಅಧಿಕಾರಿಗಳಿಗೆ ಸೂಚಿಸಿದರು.
- ಮುಂದಿನ ಸಭೆಯನ್ನು ಈ ಮಾಸಾಂತ್ಯದೊಳಗೆ ಏರ್ಪಡಿಸಲು ಸೂಚಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.
- ಮುಂದಿನ ಸಭೆಗೆ ಕಾನೂನು ಕೋಶದ ಮುಖ್ಯಸ್ಥರು ಖುದ್ದಾಗಿ ಭಾಗವಹಿಸಲು ಬರೆಯಲು ತಿಳಿಸಲಾಯಿತು.

(ಟಿ.ಎಂ.ವಿಜಯ ಭಾಸ್ಕರ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ಎಲ್ಲಾ ನಿರ್ದೇಶಕರು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
2. ಸರ್ಕಾರದ ಅಪರ ಕಾರ್ಯದರ್ಶಿ(ಆಡಳಿತ), ಗ್ರಾ.ಅ.ಪಂ.ರಾಜ್ ಇಲಾಖೆ.
3. ಸರ್ಕಾರದ ಉಪಕಾರ್ಯದರ್ಶಿ(ಆಡಳಿತ), ಗ್ರಾ.ಅ.ಪಂ.ರಾಜ್ ಇಲಾಖೆ.
4. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ.ಪಂ.ರಾಜ್ ಇಲಾಖೆ.
5. ಕಾನೂನು ಕೋಶದ ಮುಖ್ಯಸ್ಥರು, ಗ್ರಾ.ಅ.ಪಂ.ರಾಜ್ ಇಲಾಖೆ.
6. ಉಪಕಾರ್ಯದರ್ಶಿ(ಗ್ರಾ.ನೀ.ಸ), ಗ್ರಾ.ಅ.ಪಂ.ರಾಜ್ ಇಲಾಖೆ.
7. ಸರ್ಕಾರದ ಎಲ್ಲಾ ಅಧೀನ ಕಾರ್ಯದರ್ಶಿಗಳು, ಗ್ರಾ.ಅ.ಪಂ.ರಾಜ್ ಇಲಾಖೆ.
8. ವಿಶೇಷಾಧಿಕಾರಿ, ಗಣಕ ಕೋಶ ಗ್ರಾ.ಅ.ಪಂ. ರಾಜ್ ಇಲಾಖೆ.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಗ್ರಾ.ಅ.ಪಂ. ರಾಜ್ ಇಲಾಖೆ.
10. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದಶಿಗಳು, ಗ್ರಾ.ಅ.ಪಂ. ರಾಜ್ ಇಲಾಖೆ.